**ಪಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 19/02/2024 )**

**ಪಾಟೀ ಸವಾಲು :ಪ್ರತಿವಾದಿ ಪರ ಶ್ರೀ ಎಮ್ ಜಿ ವಕೀಲರಿಂದ,**

ಈ ದಾವೆ ದಾಖಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಈ ದಾವೆಯಲ್ಲಿ ನಾನು ದಾವಾ ಆಸ್ತಿಯ ಜಾಗವನ್ನು ನನಗೆ ಬಿಟ್ಟುಕೊಡಬೇಕೆಂದು ಪ್ರತಿವಾದಿಗಳ ವಿರುದ್ಧ ದಾಖಲಿಸಿರುತ್ತೇವೆ.. ಪ್ರತಿವಾದಿಗಳು ನಮ್ಮ ದಾಯಾದಿಗಳು ಆಗಿರುತ್ತಾರೆ. ನಾನು ಮತ್ತು ಪ್ರತಿವಾದಿಗಳು ಉಗ್ರಾಣಿ ಮನೆಗೆ ಸೇರಿದವರಾಗಿರುತ್ತೇವೆ ಎಂದರೆ ಸರಿ. ದಾವಾ ಆಸ್ತಿಯ ಮೂಲ ಸರ್ವೆ ನಂಬರ್ 80 ಅ ನಂತರ ಹಿಸ್ಸಾ ಆಗಿ ಈಗ 80 ಅ/4 ಆಗಿರುತ್ತದೆ.

2. ದಾವಾ ಆಸ್ತಿಯು ನನ್ನ ತಂದೆಯ ಅಣ್ಣ ರವರು ಬರೆದ ವಿಲ್ಲುನಾಮೆ ಮೂಲಕ ಬಂದಿರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ರಾಷ್ಟ್ರೀಯ ಹೆದ್ದಾರಿ, ಪಶ್ಚಿಮಕ್ಕೆ ಪ್ರತಿವಾದಿಯವರ ಜಾಗ, ದಕ್ಷಿಣಕ್ಕೆ ಹೂಯಿಲುಮಡಿಗೆ ಹೋಗುವ ರಸ್ತೆ, ಉತ್ತರಕ್ಕೆ ನಾಗರಾಜ ಶೆಟ್ಟಿಯವರ ಜಾಗ ಇರುತ್ತದೆ. ದಾವಾ ಆಸ್ತಿಗೆ ಸಂಬಂಧಿಸಿದ ದಾಖಲಾತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ನನ್ನ ದೊಡ್ಡಪ್ಪನಿಗೆ ದಾವಾ ಆಸ್ತಿಯು ಸರಕಾರದಿಂದ ಮಂಜೂರಾಗಿರುತ್ತದೆ. ಹಾಗೆ 2 ಎಕರೆ 16 ಗುಂಟೆ ಜಮೀನು ಮಂಜೂರಿಯಾಗಿರುತ್ತದೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು .**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರಧಾನ ಸಿವಿಲ್ ಜಡ್ಜ್, ಭಟ್ಕಳ.**